# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **1006**

ಸದಸ್ಯರ ಹೆಸರು : ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ)

ಉತ್ತರಿಸಬೇಕಾದ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸಬೇಕಾದ ದಿನಾಂಕ : 20-08-2025

| | ಪ್ರಶ್ನೆ | ಉತ್ತರ |
|---|---|---|
| ಅ. | ಮಾನವ ಹಸ್ತಕ್ಷೇಪವಿಲ್ಲದೇ ವೈಜ್ಞಾನಿಕವಾಗಿ ಆಧುನಿಕ ತಂತ್ರಜ್ಞಾನ ಮೂಲಕ ಪರೀಕ್ಷಿಸುವ ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥಗಳನ್ನು ಎಷ್ಟು ಜಿಲ್ಲೆಗಳಲ್ಲಿ ನಿರ್ಮಿಸಲಾಗಿದೆ: (ಎಲ್ಲೆಲ್ಲಿ ಹಾಗೂ ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುವುದರ ಕುರಿತು ಸಂಪೂರ್ಣ ವಿವರ ನೀಡುವುದು) | ರಾಜ್ಯದ ಪ್ರತಿಯೊಂದು ಪ್ರಾದೇಶಿಕ/ಸಹಾಯಕ ಪ್ರಾದೇಶಿಕ ಸಾರಿಗೆ ಕಛೇರಿಗಳ ವ್ಯಾಪ್ತಿಯಲ್ಲಿ ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದ್ದು, ಪ್ರಸ್ತುತ 27 ಜಿಲ್ಲೆಗಳಲ್ಲಿ (ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ತುಮಕೂರು, ಮೈಸೂರು, ಹಾಸನ, ಧಾರವಾಡ, ಕಲಬುರಗಿ, ಶಿವಮೊಗ್ಗ, ರಾಯಚೂರು, ದಕ್ಷಿಣ ಕನ್ನಡ, ಉತ್ತರ ಕನ್ನಡ ಬೆಳಗಾವಿ, ಹಾವೇರಿ, ಬಾಗಲಕೋಟೆ, ಕೋಲಾರ, ದಾವಣಗೆರೆ, ವಿಜಯಪುರ, ಯಾದಗಿರಿ, ಬೀದರ್, ಹೊಸಪೇಟೆ, ಬಳ್ಳಾರಿ, ಗದಗ, ಮಂಡ್ಯ, ಮಡಿಕೇರಿ, ಚಿಕ್ಕಬಳ್ಳಾಪುರ, ಚಿತ್ರದುರ್ಗ ಮತ್ತು ಚಾಮರಾಜನಗರ) ಒಟ್ಟು 45 (ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಪಥಗಳೂ ಸೇರಿ) ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥಗಳನ್ನು ನಿರ್ಮಿಸಲಾಗುತ್ತಿದೆ.<br><br>ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ 07 ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥಗಳಲ್ಲಿ ಸೆನ್ಸಾರ್ ಆಧಾರಿತ ತಂತ್ರಜ್ಞಾನವನ್ನು ಅಳವಡಿಸಲಾಗಿದ್ದು, ಅಭ್ಯರ್ಥಿಗಳ ವಾಹನ ಚಾಲನಾ ಕೌಶಲ್ಯವನ್ನು ಸೆನ್ಸಾರ್‌ಗಳ ಮೂಲಕ ಪರೀಕ್ಷಿಸಲಾಗುತ್ತಿದೆ. |
| ಆ. | ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥಗಳನ್ನು ಉಳಿದ ಎಲ್ಲಾ ಜಿಲ್ಲೆಗಳಲ್ಲೂ ನಿರ್ಮಿಸುವ ಸಂಬಂಧ ತೆಗೆದುಕೊಂಡಿರುವ ಕ್ರಮಗಳೇನು: ಪ್ರತಿ ಪರೀಕ್ಷಾ ಪಥ ನಿರ್ಮಾಣಕ್ಕೆ ಭರಿಸಲಾಗುತ್ತಿರುವ ವೆಚ್ಚ ಎಷ್ಟು: | ಸಾರಿಗೆ ಇಲಾಖೆಯ ಸ್ವಾಧೀನದಲ್ಲಿ ಜಮೀನು ಲಭ್ಯವಿರುವ ಕಡೆಯಲೆಲ್ಲಾ ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥಗಳನ್ನು ನಿರ್ಮಿಸಲಾಗುತ್ತಿದೆ. ಉಳಿದ ಕಛೇರಿಗಳಿಗೆ ಸಂಬಂಧಿಸಿದಂತೆ ಅಗತ್ಯವಿರುವ ಜಮೀನು ಪಡೆಯಲು ಕ್ರಮವಹಿಸಲಾಗುತ್ತಿದೆ.<br>ಪ್ರತಿ ಪರೀಕ್ಷಾ ಪಥ ನಿರ್ಮಾಣಕ್ಕೆ ಭರಿಸಲಾಗುತ್ತಿರುವ ವೆಚ್ಚದ ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ. |
| ಇ. | ಸಾರ್ವಜನಿಕ ಖಾಸಗಿ ಸಹಭಾಗಿತ್ವದಡಿ ಯಾವ ಯಾವ ಜಿಲ್ಲೆಗಳಲ್ಲಿ BOT (Build Operate Transfer) BOO (Build Own Operate) ಮಾದರಿಯಲ್ಲಿ Automated Testing Station (ATS) ಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ: ಮತ್ತು ಎಲ್ಲೆಲ್ಲಿ; (ಸಂಪೂರ್ಣ ವಿವರ ನೀಡುವುದು) | ಜಮೀನು ಲಭ್ಯವಿರುವ ರಾಜ್ಯದ 12 ಸ್ಥಳಗಳಲ್ಲಿ (ದೇವನಹಳ್ಳಿ, ಕೋಲಾರ, ಶಿವಮೊಗ್ಗ, ದಾವಣಗೆರೆ, ಬೆಳಗಾವಿ, ಗದಗ, ರಾಣಿಬೆನ್ನೂರು, ವಿಜಯಪುರ, ಬಾಗಲಕೋಟೆ, ಬಳ್ಳಾರಿ, ಬೀದರ್ & ಯಾದಗಿರಿ) ಡಿಸೈನ್ ಬಿಲ್ಡ್ ಫೈನಾನ್ಸ್ ಆಪರೇಟ್ ಮತ್ತು ಟ್ರಾನ್ಸ್‌ಫರ್ (DBFOT) ಮಾದರಿಯಲ್ಲಿ ಮತ್ತು ಜಮೀನು ಲಭ್ಯವಿಲ್ಲದ 20 ಸ್ಥಳಗಳಲ್ಲಿ (ಬೆಂಗಳೂರಿನಲ್ಲಿ ನಾಲ್ಕು ಸ್ಥಳಗಳು, ಚಿಕ್ಕಬಳ್ಳಾಪುರ, ರಾಮನಗರ, ತುಮಕೂರು, ಮಂಡ್ಯ, ಚಾಮರಾಜನಗರ, ಹಾಸನ, ಮಡಿಕೇರಿ, ದಕ್ಷಿಣಕನ್ನಡ, ಉಡುಪಿ, ಚಿತ್ರದುರ್ಗ, ಚಿಕ್ಕಮಗಳೂರು, ಉತ್ತರಕನ್ನಡ, ಕಲಬುರಗಿ, ರಾಯಚೂರು, ಕೊಪ್ಪಳ ಮತ್ತು ಹೊಸಪೇಟೆ) ಬಿಲ್ಡ್ ಓನ್ ಆಪರೇಟ್ (BOO) ಮಾದರಿಯಲ್ಲಿ ಸ್ಥಾಪಿಸುವ ಸಂಬಂಧ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ. |

| | ಪ್ರಶ್ನೆ | ಉತ್ತರ |
|---|---|---|
| ಈ. | BOT ಹಾಗೂ BOO ಮಾದರಿಗಳ ನಡುವಿನ ವ್ಯತ್ಯಾಸವೇನು? | DBFOT ಮಾದರಿಯಲ್ಲಿ ATS ಸ್ಥಾಪನೆಗೆ ಸಾರಿಗೆ ಇಲಾಖೆಯು ಜಮೀನು ನೀಡುತ್ತಿದ್ದು, ಕಟ್ಟಡ ನಿರ್ಮಾಣ, ಯಂತ್ರೋಪಕರಣಗಳ ಅಳವಡಿಕೆಯನ್ನು ಖಾಸಗಿ ಅಥವಾ ಟೆಂಡರ್‌ನಲ್ಲಿ ಆಯ್ಕೆಯಾಗುವ ಸಂಸ್ಥೆಗಳು ನಿರ್ಮಿಸಿ, ನಿಗದಿತ ಸಮಯದವರೆಗೆ ಕಾರ್ಯಾಚರಣೆಗೊಳಿಸಿ ನಂತರ ಸದರಿ ಕೇಂದ್ರಗಳನ್ನು ಸಾರಿಗೆ ಇಲಾಖೆಗೆ ಹಸ್ತಾಂತರಿಸಬೇಕಾಗಿರುತ್ತದೆ.<br><br>BOO ಮಾದರಿಯಲ್ಲಿ ಟೆಂಡರ್ ನಲ್ಲಿ ಆಯ್ಕೆಯಾಗುವ ಸಂಸ್ಥೆಗಳೇ ಜಾಗದೊಂದಿಗೆ ಕಟ್ಟಡ ನಿರ್ಮಾಣ ಮತ್ತು ಯಂತ್ರೋಪಕರಣ ಅಳವಡಿಕೆ ಕಾರ್ಯಗಳನ್ನು ಕೈಗೊಂಡು ನಿಗದಿತ ಸಮಯದವರೆಗೆ ಕಾರ್ಯಾಚರಣೆಗೊಳಿಸಬೇಕಾಗಿರುತ್ತದೆ. ಈ ಮಾದರಿಯಲ್ಲಿ ATS ಗಳನ್ನು ಹಸ್ತಾಂತರಿಸಲಾಗುವುದಿಲ್ಲ. |

**ಟಿಡಿ 62 ಟಿಡಿಕ್ಯೂ 2025**

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು

'ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1006 ಕ್ಕೆ ಅನುಬಂಧ

| ಕ್ರಮ ಸಂ. | ಜಿಲ್ಲೆಗಳು | ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥಗಳು | ಅನುಮೋದನೆ ನೀಡಿದ ವರ್ಷ | ಅಂದಾಜು ರೂ.ಲಕ್ಷಗಳಲ್ಲಿ | ಇಲ್ಲಿಯವರೆಗೆ ಬಿಡುಗಡೆಯಾಗಿರುವ ಅನುದಾನ ರೂ.ಲಕ್ಷಗಳಲ್ಲಿ | ಷರಾ |
|---|---|---|---|---|---|---|
| 1 | ಬೆಂಗಳೂರು ನಗರ | ಜ್ಞಾನಭಾರತಿ ಡ್ರೈವಿಂಗ್ ಟ್ರ್ಯಾಕ್ | 2009-10 | 120.00 | 120.00 | ಕಾರ್ಯಾಚರಿಸುತ್ತಿದೆ. |
| 2 | ಬೆಂಗಳೂರು ನಗರ | ಎಲೆಕ್ಟ್ರಾನಿಕ್ಸ್ ಸಿಟಿ ಡ್ರೈವಿಂಗ್ ಟ್ರ್ಯಾಕ್ | 2012-13 | 460.00 | 460.00 | ಕಾರ್ಯಾಚರಿಸುತ್ತಿದೆ. |
| 3 | ಹಾಸನ | ಹಾಸನ ಡ್ರೈವಿಂಗ್ ಟ್ರ್ಯಾಕ್ | | 400.00 | 400.00 | ಕಾರ್ಯಾಚರಿಸುತ್ತಿದೆ. |
| 4 | ಮೈಸೂರು | ಮೈಸೂರು ಡ್ರೈವಿಂಗ್ ಟ್ರ್ಯಾಕ್ | | 400.00 | 400.00 | ಕಾರ್ಯಾಚರಿಸುತ್ತಿದೆ. |
| 5 | ಧಾರವಾಡ | ದಾರವಾಡ ಡ್ರೈವಿಂಗ್ ಟ್ರ್ಯಾಕ್ | | 400.00 | 400.00 | ಕಾರ್ಯಾಚರಿಸುತ್ತಿದೆ. |
| 6 | ಕಲಬುರಗಿ | ಕಲಬುರಗಿ ಡ್ರೈವಿಂಗ್ ಟ್ರ್ಯಾಕ್ | | 415.00 | 415.00 | ಕಾರ್ಯಾಚರಿಸುತ್ತಿದೆ. |
| 7 | ಶಿವಮೊಗ್ಗ | ಶಿವಮೊಗ್ಗ ಡ್ರೈವಿಂಗ್ ಟ್ರ್ಯಾಕ್ | 2015-16 | 388.00 | 388.00 | ಕಾರ್ಯಾಚರಿಸುತ್ತಿದೆ. |
| 8 | ಮಂಗಳೂರು | ಮಂಗಳೂರು ಡ್ರೈವಿಂಗ್ ಟ್ರ್ಯಾಕ್ | 2018-19 | 1000.00 | 743.00 | ಕಾಮಗಾರಿ ಪೂರ್ಣಗೊಂಡಿದ್ದು, ಕಾರ್ಯಾಚರಣೆಗೆ ಸಿದ್ಧವಾಗಿದೆ |
| 9 | ಬೆಳಗಾವಿ | ಬೆಳಗಾವಿ ಡ್ರೈವಿಂಗ್ ಟ್ರ್ಯಾಕ್ | 2016-17 | 805.00 | 805.00 | ಸೆನ್ಸಾರ್ ಅಳವಡಿಕೆ ಕಾರ್ಯ ಪ್ರಗತಿಯಲ್ಲಿದೆ. |
| 10 | ರಾಯಚೂರು | ರಾಯಚೂರು ಡ್ರೈವಿಂಗ್ ಟ್ರ್ಯಾಕ್ | | 800.00 | 768.31 | ಉದ್ಘಾಟನೆಗೆ ಸಿದ್ಧವಾಗಿದೆ |
| 11 | ಬೆಳಗಾವಿ | ಚಿಕ್ಕೋಡಿ ಡ್ರೈವಿಂಗ್ ಟ್ರ್ಯಾಕ್ | 2020-21 | 900.00 | 834.91 | ಕಾಮಗಾರಿ ಪೂರ್ಣಗೊಂಡಿದೆ |
| 12 | ಬೆಳಗಾವಿ | ಅಥಣಿ ಡ್ರೈವಿಂಗ್ ಟ್ರ್ಯಾಕ್ | | 750.00 | 696.76 | ಕಾಮಗಾರಿ ಪೂರ್ಣಗೊಂಡಿದೆ |
| 13 | ಹಾವೇರಿ | ಹಾವೇರಿ ಡ್ರೈವಿಂಗ್ ಟ್ರ್ಯಾಕ್ | | 835.00 | 719.00 | ಕಾಮಗಾರಿ ಪೂರ್ಣಗೊಂಡಿದೆ |
| 14 | ಬಾಗಲಕೋಟೆ | ಬಾಗಲಕೋಟೆ ಡ್ರೈವಿಂಗ್ ಟ್ರ್ಯಾಕ್ | | 900.00 | 803.71 | ಕಾಮಗಾರಿ ಪೂರ್ಣಗೊಂಡಿದೆ |
| 15 | ಬಾಗಲಕೋಟೆ | ಜಮಖಂಡಿ ಡ್ರೈವಿಂಗ್ ಟ್ರ್ಯಾಕ್ | | 750.00 | 600.00 | ಕಾಮಗಾರಿ ಪೂರ್ಣಗೊಂಡಿದೆ. |
| 16 | ಬೆಂಗಳೂರು ಗ್ರಾಮಾಂತರ | ದೇವನಹಳ್ಳಿ ಡ್ರೈವಿಂಗ್ ಟ್ರ್ಯಾಕ್ | 2022-23 | 800.00 | 800.00 | ಕಾಮಗಾರಿ ಪೂರ್ಣಗೊಂಡಿದೆ |
| 17 | ಕೋಲಾರ | ಕೋಲಾರ, ಡ್ರೈವಿಂಗ್ ಟ್ರ್ಯಾಕ್ | | 900.00 | 350.00 | ಕಾಮಗಾರಿ ಪ್ರಗತಿಯಲ್ಲಿದೆ |
| 18 | ದಾವಣಗೆರೆ | ದಾವಣಗೆರೆ, ಡ್ರೈವಿಂಗ್ ಟ್ರ್ಯಾಕ್ | | 900.00 | 850.00 | ಕಾಮಗಾರಿ ಪೂರ್ಣಗೊಂಡಿದೆ |
| 19 | ವಿಜಯಪುರ | ವಿಜಯಪುರ ಡ್ರೈವಿಂಗ್ ಟ್ರ್ಯಾಕ್ | | 900.00 | 825.00 | ಕಾಮಗಾರಿ ಪ್ರಗತಿಯಲ್ಲಿದೆ |
| 20 | ಯಾದಗಿರಿ | ಯಾದಗಿರಿ ಡ್ರೈವಿಂಗ್ ಟ್ರ್ಯಾಕ್ | | 900.00 | 750.00 | ಕಾಮಗಾರಿ ಅಂತಿಮ ಹಂತದಲ್ಲಿದೆ |
| 21 | ಬೀದರ್ | ಬೀದರ್ ಡ್ರೈವಿಂಗ್ ಟ್ರ್ಯಾಕ್ | | 900.00 | 750.00 | ಕಾಮಗಾರಿ ಅಂತಿಮ ಹಂತದಲ್ಲಿದೆ |
| 22 | ಹೊಸಪೇಟೆ | ಹೊಸಪೇಟೆ ಡ್ರೈವಿಂಗ್ ಟ್ರ್ಯಾಕ್ | | 900.00 | 850.00 | ಕಾಮಗಾರಿ ಅಂತಿಮ ಹಂತದಲ್ಲಿದೆ |
| 23 | ಬಳ್ಳಾರಿ | ಬಳ್ಳಾರಿ ಡ್ರೈವಿಂಗ್ ಟ್ರ್ಯಾಕ್ | | 900.00 | 750.00 | ಕಾಮಗಾರಿ ಅಂತಿಮ ಹಂತದಲ್ಲಿದೆ |
| 24 | ಗದಗ | ಗದಗ ಡ್ರೈವಿಂಗ್ ಟ್ರ್ಯಾಕ್ | | 900.00 | 788.64 | ಕಾಮಗಾರಿ ಪೂರ್ಣಗೊಂಡಿದೆ. |

-2

| ಕ್ರಮ ಸಂ | ಜಿಲ್ಲೆಗಳು | ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥಗಳು | ಅನುಮೋದನೆ ನೀಡಿದ ವರ್ಷ | ಅಂದಾಜು ರೂ.ಲಕ್ಷಗಳಲ್ಲಿ | ಇಲ್ಲಿಯವರೆಗೆ ಬಿಡುಗಡೆಯಾಗಿರುವ ಅನುದಾನ ರೂ.ಲಕ್ಷಗಳಲ್ಲಿ | ಷರಾ |
|---|---|---|---|---|---|---|
| 25 | ಹಾಸನ | ಸಕಲೇಶಪುರ ಡ್ರೈವಿಂಗ್ ಟ್ರ್ಯಾಕ್ | 2023-24 | 475.00 | 50.00 | ಕಾಮಗಾರಿ ಪ್ರಗತಿಯಲ್ಲಿದೆ |
| 26 | ಶಿವಮೊಗ್ಗ | ಸಾಗರ ಡ್ರೈವಿಂಗ್ ಟ್ರ್ಯಾಕ್ | | 780.00 | 200.00 | ಕಾಮಗಾರಿ ಪ್ರಗತಿಯಲ್ಲಿದೆ |
| 27 | ಬೀದರ್ | ಭಾಲ್ಕಿ ಡ್ರೈವಿಂಗ್ ಟ್ರ್ಯಾಕ್ | | 500.00 | 405.00 | ಕಾಮಗಾರಿ ಪೂರ್ಣಗೊಂಡಿದೆ |
| 28 | ಬೆಳಗಾವಿ | ಗೋಕಾಕ್ ಡ್ರೈವಿಂಗ್ ಟ್ರ್ಯಾಕ್ | | 600.00 | 150.00 | ಕಾಮಗಾರಿ ಪ್ರಗತಿಯಲ್ಲಿದೆ |
| 29 | ಹಾವೇರಿ | ರಾಣೆಬೆನ್ನೂರು ಡ್ರೈವಿಂಗ್ ಟ್ರ್ಯಾಕ್ | | 665.00 | 250.00 | ಕಾಮಗಾರಿ ಅಂತಿಮ ಹಂತದಲ್ಲಿದೆ |
| 30 | ಉತ್ತರ ಕನ್ನಡ | ಶಿರಸಿ ಡ್ರೈವಿಂಗ್ ಟ್ರ್ಯಾಕ್ | | 760.00 | 160.00 | ಕಾಮಗಾರಿ ಪ್ರಗತಿಯಲ್ಲಿದೆ |
| 31 | ಉತ್ತರ ಕನ್ನಡ | ದಾಂಡೇಲಿ ಡ್ರೈವಿಂಗ್ ಟ್ರ್ಯಾಕ್ | | 660.00 | 560.00 | ಕಾಮಗಾರಿ ಅಂತಿಮ ಹಂತದಲ್ಲಿದೆ |
| 32 | ಬೆಳಗಾವಿ | ಬೈಲಹೊಂಗಲ, ಡ್ರೈವಿಂಗ್ ಟ್ರ್ಯಾಕ್ | | 550.00 | 500.00 | ಕಾಮಗಾರಿ ಪೂರ್ಣಗೊಂಡಿದೆ |
| 33 | ಕೋಲಾರ | ಕೆ.ಜಿ.ಎಫ್. ಡ್ರೈವಿಂಗ್ ಟ್ರ್ಯಾಕ್ | | 500.00 | 379.00 | ಕಾಮಗಾರಿ ಪೂರ್ಣಗೊಂಡಿದೆ |
| 34 | ಕೋಲಾರ | ಚಿಂತಾಮಣಿ ಡ್ರೈವಿಂಗ್ ಟ್ರ್ಯಾಕ್ | | 575.50 | 535.05 | ಕಾಮಗಾರಿ ಅಂತಿಮ ಹಂತದಲ್ಲಿದೆ |
| 35 | ಬೆಂಗಳೂರು ನಗರ | ಯಲಹಂಕ ಡ್ರೈವಿಂಗ್ ಟ್ರ್ಯಾಕ್ | | 400.00 | 175.00 | ಕಾಮಗಾರಿ ಪ್ರಗತಿಯಲ್ಲಿದೆ |
| 36 | ಮಂಡ್ಯ | ನಾಗಮಂಗಲ ಡ್ರೈವಿಂಗ್ ಟ್ರ್ಯಾಕ್ | | 698.00 | 150.00 | ಕಾಮಗಾರಿ ಪ್ರಾರಂಭಗೊಳ್ಳಬೇಕಿದೆ |
| 37 | ಬೆಂಗಳೂರು ನಗರ | ನೆಲಮಂಗಲ ಡ್ರೈವಿಂಗ್ ಟ್ರ್ಯಾಕ್ | 2024-25 | 600.00 | 100.00 | ಕಾಮಗಾರಿ ಪ್ರಗತಿಯಲ್ಲಿದೆ |
| 38 | ತುಮಕೂರು | ಮಧುಗಿರಿ ಡ್ರೈವಿಂಗ್ ಟ್ರ್ಯಾಕ್ | | 600.00 | 100.00 | Call-2 ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ |
| 39 | ಮಡಿಕೇರಿ | ಮಡಿಕೇರಿ ಡ್ರೈವಿಂಗ್ ಟ್ರ್ಯಾಕ್ | | 570.00 | 50.00 | ಕಾಮಗಾರಿ ಪ್ರಾರಂಭಗೊಳ್ಳಬೇಕಿದೆ |
| 40 | ದಕ್ಷಿಣ ಕನ್ನಡ | ಪುತ್ತೂರು ಡ್ರೈವಿಂಗ್ ಟ್ರ್ಯಾಕ್ | | 780.80 | 50.00 | ಕಾಮಗಾರಿ ಪ್ರಾರಂಭಗೊಳ್ಳಬೇಕಿದೆ |
| 41 | ಮೈಸೂರು | ಹುಣಸೂರು ಡ್ರೈವಿಂಗ್ ಟ್ರ್ಯಾಕ್ | | 500.00 | 50.00 | Call-2 ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ |
| 42 | ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ ಡ್ರೈವಿಂಗ್ ಟ್ರ್ಯಾಕ್ | | 549.60 | 100.00 | Call-2 ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ |
| 43 | ಚಿತ್ರದುರ್ಗ | ಚಿತ್ರದುರ್ಗ ಡ್ರೈವಿಂಗ್ ಟ್ರ್ಯಾಕ್ | 2025-26 | 750.00 | 25.00 | ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ |
| 44 | ಚಾಮರಾಜನಗರ | ಚಾಮರಾಜನಗರ ಡ್ರೈವಿಂಗ್ ಟ್ರ್ಯಾಕ್ | | 767.00 | 20.00 | ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ |
| 45 | ಉತ್ತರ ಕನ್ನಡ | ಹೊನ್ನಾವರ ಡ್ರೈವಿಂಗ್ ಟ್ರ್ಯಾಕ್ | | 585.00 | 20.00 | ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ |

(ಸಹಿ)

ಆಯುಕ್ತರು,
ಸಾರಿಗೆ ಮತ್ತು ರಸ್ತೆ ಸುರಕ್ಷತೆ,
ಬೆಂಗಳೂರು.